# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 276 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 15/02/2024 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು; ಯಾವ ಯಾವ ವಲಯಗಳಲ್ಲಿ ಎಷ್ಟು ಸಂಘಟಿತ ಕಾರ್ಮಿಕರು ದುಡಿಯುತ್ತಿದ್ದಾರೆ; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ದುಡಿಯುತ್ತಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ ನಿಖರವಾದ ಸಂಖ್ಯೆ ಲಭ್ಯವಿರುವುದಿಲ್ಲ ಹಾಗೂ ಅಸಂಘಟಿತ ಕಾರ್ಮಿಕರ ದತ್ತಾಂಶ ಸಂಗ್ರಹಣೆ ಉದ್ದೇಶದಿಂದ ಕೇಂದ್ರ ಸರ್ಕಾರವು ಇ-ಶ್ರಮ್ ಪೋರ್ಟಲ್ ನಲ್ಲಿ 379 ವರ್ಗಗಳನ್ನು ಗುರುತಿಸಿ ನೋಂದಣಿ ಮಾಡಲಾಗುತ್ತಿದ್ದು, ರಾಜ್ಯದಲ್ಲಿ ಒಟ್ಟು 1.89 ಕೋಟಿ ಅಸಂಘಟಿತ ಕಾರ್ಮಿಕರಿರುವುದಾಗಿ ಅಂದಾಜಿಸಲಾಗಿರುತ್ತದೆ.<br><br>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಯಲ್ಲಿ ಪ್ರಸ್ತುತ ನೋಂದಣಿಯಾಗಿರುವ ಅಸಂಘಟಿತ ಕಾರ್ಮಿಕರ ಅಂಕಿ ಅಂಶಗಳ ವಿವರ ಈ ಕೆಳಕಂಡಂತಿದೆ.<br><br>**1. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ಅಸಂಘಟಿತ ವಲಯಕ್ಕೆ ಸೇರಿದ 40.82 ಲಕ್ಷ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಿರುತ್ತಾರೆ.<br>ನೋಂದಣಿಯಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ.<br><br>**2. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**<br>ಈ ಮಂಡಳಿಯಲ್ಲಿ ವಿವಿಧ ಯೋಜನೆಗಳಡಿಯಲ್ಲಿ ನೋಂದಣಿಯಾದ ಕೋವಿಡ್-19 ರ ಅಲೆಯಲ್ಲಿ ನೆರವು ಕೋರಿ ಅರ್ಜಿ ಸಲ್ಲಿಸಿದ ಕಾರ್ಮಿಕರ ವಿವರ ಈ ಕೆಳಕಂಡಂತಿದೆ ಹಾಗೂ ಜಿಲ್ಲಾವಾರು ವಿವರವನ್ನು **ಅನುಬಂಧ-2** ರಲ್ಲಿ ಬದಗಿಸಿದೆ. |

<table>
<tr>
<td></td>
<td></td>
<td>
<table>
<tr><td>01</td><td>ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ</td><td>8,40,561 (ಸಾರಿಗೆ ಇಲಾಖೆಯ ದತ್ತಾಂಶದ ಪ್ರಕಾರ)</td></tr>
<tr><td>02</td><td>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೊಜನೆ</td><td>2,96,724</td></tr>
<tr><td>03</td><td>ಕೋವಿಡ್-19ರ ವಿಶೇಷ ಪ್ಯಾಕೇಜ್ ರಡಿ ಅರ್ಜಿ ಸಲ್ಲಿಸಿದ ಕಾರ್ಮಿಕರು</td><td>14,52,943</td></tr>
<tr><td>04</td><td>ಇ-ಶ್ರಮ್ ಕಾರ್ಯಕ್ರಮ (ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ ಸೇರಿದಂತೆ).</td><td>80,18,436</td></tr>
<tr><td>05</td><td>ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ</td><td>2141</td></tr>
<tr><td colspan="2">ಒಟ್ಟು</td><td>1,06,10,805</td></tr>
</table>
<br>
ಇ.ಪಿ.ಎಫ್, ಇ.ಎಸ್.ಐ ಮುಂತಾದ ಸಾಮಾಜಿಕ ಭದ್ರತಾ ಕಾಯ್ದೆಗಳ ವ್ಯಾಪ್ತಿಗೆ ಬರುವ ಕಾರ್ಮಿಕರು ಸಂಘಟಿತ ಕಾರ್ಮಿಕರಾಗಿದ್ದು, ಸದರಿ ಕಾರ್ಮಿಕರು ವಿವಿಧ ಕೈಗಾರಿಕೆಗಳು, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ಪ್ಲಾಂಟೇಷನ್, ಬೀಡಿ ತಯಾರಿಕೆ, ಸಾರಿಗೆ ವಲಯ ಮುಂತಾದ ವಲಯಗಳಲ್ಲಿ ಕೆಲಸ ಮಾಡುತ್ತಿದ್ದು. ಕಾರ್ಖಾನೆಗಳ ಕಾಯ್ದೆ, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಡಿಯ ನೋಂದಣಿ ಸಂದರ್ಭದಲ್ಲಿ ನೀಡಲಾದ ಸಂಘಟಿತ ಕಾರ್ಮಿಕರ ಸಂಖ್ಯೆ ಹಾಗೂ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ವಂತಿಕೆ ಪಾವತಿ ಮಾಡುವ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-3, ಅನುಬಂಧ-3(ಅ) ಮತ್ತು ಅನುಬಂಧ-3 (ಆ) ರಲ್ಲಿ ಒದಗಿಸಿದೆ.
</td>
</tr>
<tr>
<td>ಆ)</td>
<td>ಈ ಕಾರ್ಮಿಕರಿಗೆ ಹಾಲಿ ನೀಡುತ್ತಿರುವ ವೇತನ ಹಾಗೂ ಅವರ ಅಭ್ಯುದಯಕ್ಕಾಗಿ ಜಾರಿಗೆ ತರಲಾದ ಯೋಜನೆಗಳು ಯಾವುವು;</td>
<td>ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರನ್ನು ಒಳಗೊಂಡಂತೆ, ಒಟ್ಟು ಎಂಬತ್ತೊಂದು (81) ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಿದ್ದು, ಕಾಯ್ದೆಯ ನಿಯಾಮಾನುಸಾರ ಕಾಲಕಾಲಕ್ಕೆ ಪರಿಷ್ಕರಣೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಸದರಿ ಅನುಸೂಚಿತ ಉದ್ದಿಮೆಗಳಿಗೆ 2023-24 ನೇ ಸಾಲಿಗೆ ಅನ್ವಯವಾಗುವ ಕನಿಷ್ಠದಿಂದ-ಗರಿಷ್ಠ ವೇತನ ದರಗಳ ವಿವರಗಳನ್ನು ಅನುಬಂಧ-4 ರಲ್ಲಿ ಒದಗಿಸಲಾಗಿದೆ.<br><br>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳಲ್ಲಿ ಫಲಾನುಭವಿಗಾಗಿ ನೋಂದಾಯಿತರಾದ ಕಾರ್ಮಿಕರ ಅಭ್ಯುದಯಕ್ಕಾಗಿ ಜಾರಿಗೆ ತರಲಾದ ಯೋಜನೆಗಳ ವಿವರ ಈ ಕೆಳಕಂಡಂತಿದೆ.</td>
</tr>
</table>

**1. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**

ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಭಿತರಿಗಾಗಿ ರೂಪಿಸಿರುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ವಿವರವನ್ನು **ಅನುಬಂಧ-5 ರಲ್ಲಿ** ಒದಗಿಸಲಾಗಿದೆ.

**2. <u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:</u>**

ಈ ಮಂಡಳಿಯ ವತಿಯಿಂದ ಅಸಂಘಟಿತ ಕಾರ್ಮಿಕರ ಅಭ್ಯುದಯಕ್ಕಾಗಿ ಮಂಡಳಿಯ ಮೂಲಕ ಜಾರಿಗೊಳಿಸಲಾಗುತ್ತಿರುವ ಸಾಮಾಜಿಕ ಭದ್ರತಾ ಯೋಜನೆಗಳ ವಿವರ ಈ ಕೆಳಕಂಡಂತಿದೆ.

**(1) <u>ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-</u>**

ಈ ಯೋಜನೆಯಡಿ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಅಪಘಾತ ಪರಿಹಾರ ಮತ್ತು ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಮಕ್ಕಳಿಗೆ ಶೈಕ್ಷಣಿಕ ಧನ ಸಹಾಯ ಒದಗಿಸಲಾಗುತ್ತಿದ್ದು, ವಿವರಗಳು ಈ ಕೆಳಗಿನಂತಿವೆ:

**ಅ) ಅಪಘಾತ ಪರಿಹಾರ ಸೌಲಭ್ಯ:** ಈ ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ನಾಮನಿರ್ದೇಶಿತರಿಗೆ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ಫಲಾನುಭವಿಗೆ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ.

**(ಆ) ಶೈಕ್ಷಣಿಕ ಧನ ಸಹಾಯ:** ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಗರಿಷ್ಠ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/- ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

ಸಾರಿಗೆ ಇಲಾಖೆಯಿಂದ ಕರ್ನಾಟಕ ರಾಜ್ಯದಲ್ಲಿ ವಾಣಿಜ್ಯ ಸಾರಿಗೆ ವಾಹನ ಚಲಾಯಿಸಲು ಊರ್ಜಿತ ಚಾಲನಾ ಪರವಾನಗಿ ಪಡೆದ ಎಲ್ಲಾ ಚಾಲಕರು ತಕ್ಷಣದಿಂದ ಫಲಾನುಭವಿಯೆಂದು ಪರಿಗಣಿಸುತ್ತಿದ್ದು, ಯೋಜನೆಯಡಿ ಪ್ರತ್ಯೇಕ ನೋಂದಣಿಯ ಅವಶ್ಯಕತೆಯಿರುವುದಿಲ್ಲ.

ಸದರಿ ವಾಹನಗಳ ನಿರ್ವಾಹಕರು ಹಾಗೂ ಕ್ಲೀನರ್‌ಗಳು ಯೋಜನೆಯಡಿ ನೋಂದಣಾಧಿಕಾರಿಗಳಲ್ಲಿ ನೋಂದಾಯಿಸಬೇಕಾಗುತ್ತದೆ.

**<u>(2) ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-</u>**

ಈ ಯೋಜನೆಯಡಿ 11 ವರ್ಗಗಳ ಅಸಂಘಟಿತ ಕಾರ್ಮಿಕರಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು,

ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ" ರನ್ನು ಉಚಿತವಾಗಿ ಆನ್‌ಲೈನ್ ಮೂಲಕ ನೋಂದಾಯಿಸಿ ಗುರುತಿನ ಚೀಟಿ ನೀಡುತ್ತಿದ್ದು, ಇವರಿಗೆ ಕೋವಿಡ್-19 ರ 2ನೇ ಅಲೆಯಲ್ಲಿ ರೂ. 2000/- ಗಳ ಒಂದು ಬಾರಿ ನೆರವನ್ನು ಒದಗಿಸಲಾಗಿದೆ. ಸದರಿ ಕಾರ್ಮಿಕರಿಗೆ ಯಾವುದೇ ಆರ್ಥಿಕ ಸೌಲಭ್ಯಗಳನ್ನು ಒದಗಿಸುತ್ತಿಲ್ಲ.

**(3) <u>ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ:-</u>**

"ಇ-ಕಾಮರ್ಸ್" ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗಿಗ್ ಕಾರ್ಮಿಕರನ್ನು (ಡೆಲಿವರಿ ಬಾಯ್ಸ್) ಸೇವಾಸಿಂಧು ಪೋರ್ಟಲ್ ನಲ್ಲಿ ನೋಂದಾಯಿಸಲಾಗುತ್ತಿದ್ದು, ಇವರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

- ಅಪಘಾದಿಂದ ಮರಣ ಹೊಂದಿದಲ್ಲಿ ವಿಮಾ ಪರಿಹಾರ ರೂ2.00 ಲಕ್ಷ ಹಾಗೂ ಜೀವ ವಿಮೆ ರೂ 2.00 ಲಕ್ಷ ಸೇರಿ ಒಟ್ಟು ರೂ.4.00 ಲಕ್ಷಗಳು.
- ಅಪಘಾದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2.00 ಲಕ್ಷಗಳವರೆಗೆ
- ಆಸ್ಪತ್ರೆ ವೆಚ್ಚ ಮರುಪಾವತಿ ರೂ.1.00 ಲಕ್ಷಗಳವರೆಗೆ (ಅಪಘಾತ ಪ್ರಕರಣಗಳಿಗೆ ಮಾತ್ರ)
- ಜೀವ ವಿಮಾ ರೂ.2.00 ಲಕ್ಷಗಳು.

**<u>(4) ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ:</u>**

ಹೊಸದಾಗಿ ರೂಪಿಸಿರುವ ಈ ಯೋಜನೆಯಡಿ ದಿನ ಪತ್ರಿಕೆ ವಿತರಿಸುವ ಕಾರ್ಮಿಕ ( News Paper Boy) ರಿಗೆ ರೂ.2.00 ಲಕ್ಷಗಳ ಅಪಘಾತ ಪರಿಹಾರ ಹಾಗೂ ರೂ.1.00 ಲಕ್ಷದವರೆಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

**<u>(5) ಕೇಂದ್ರ ಸರ್ಕಾರದ ಇ-ಶ್ರಮ್ ಕಾರ್ಯಕ್ರಮದಡಿ ನೋಂದಣಿ:-</u>**

ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಸಮಗ್ರ ರಾಷ್ಟ್ರೀಯ ದತ್ತಾಂಶ (NDUW-National Database for Unorganised Worker) ಕ್ರೋಢೀಕರಿಸಲು ಸಾಮಾನ್ಯ ಸೇವಾ ಕೇಂದ್ರಗಳ (CSC) ಸಹಯೋಗದೊಂದಿಗೆ 379 ವರ್ಗಗಳ ಅಸಂಘಟಿತ ವರ್ಗಗಳ ಕಾರ್ಮಿಕರನ್ನು ಇ-ಶ್ರಮ್ ಪೋರ್ಟಲ್ ಮೂಲಕ ಉಚಿತವಾಗಿ ನೋಂದಾಯಿಸಲಾಗುತ್ತಿದೆ. ಸದರಿ ಕಾರ್ಮಿಕರು ಸಾಮಾನ್ಯ ಸೇವಾ ಕೇಂದ್ರ (CSC)/ಬೆಂಗಳೂರು ಒನ್/ಗ್ರಾಮ್ ಒನ್/ಭಾರತೀಯ ಅಂಚೆಯನ್ನು ಭೇಟಿ ನೀಡುವ ಮೂಲಕ ಅಥವಾ ಉಚಿತವಾಗಿ ಸ್ವಯಂ ಆಗಿ ನೋಂದಾಯಿಸಿಕೊಳ್ಳಬಹುದಾಗಿದ್ದು ಸ್ಥಳದಲ್ಲಿಯೇ ಗುರುತಿನ ಚೀಟಿ ಪಡೆಯಬಹುದಾಗಿದೆ. ಈ ದತ್ತಾಂಶವನ್ನು ಬಳಸಿಕೊಂಡು ವಿಶೇಷ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲು ಕೇಂದ್ರ ಸರ್ಕಾರವು ಉದ್ದೇಶಿಸಿರುತ್ತದೆ.

**3. ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:**

ಈ ಮಂಡಳಿಗೆ ಸಂಘಟಿತ ಕಾರ್ಮಿಕರಿಂದ ರೂ 20/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕರಿಂದ ರೂ 40/- ರಂತೆ ಹಾಗೂ ಸರ್ಕಾರದಿಂದ ಪ್ರತಿ ಕಾರ್ಮಿಕರಿಗೆ ರೂ. 20/- ರಂತೆ ವಂತಿಗೆಯಾಗಿ ಪಾವತಿಸಲಾಗುತ್ತಿದೆ. ಈ ವಂತಿಗೆಯ ಮೊತ್ತವನ್ನು ಸಂಘಟಿತ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ
2) ಕಾರ್ಮಿಕರಿಗೆ ವೈದ್ಯಕೀಯ ನೆರವು
3) ಕಾರ್ಮಿಕರಿಗೆ ಅಪಘಾತ ಧನ ಸಹಾಯ
4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯ ಸೌಲಭ್ಯ
5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ
6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ
7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನ ಸಹಾಯ

ಇ) ಈ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರ ಜಾರಿಗೊಳಿಸಿದ ಯೋಜನೆಗಳು ಯಾವುವು; ಇದಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣ ಮೀಸಲಿಡಲಾಗಿದೆ; ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳಿಂದ ಸಂಘಟಿತ ಮತ್ತು ಅಸಂಘಟಿತ ವಲಯಕ್ಕೆ ಸೇರಿದ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಅಭಿವೃದ್ಧಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳ ವಿವರ ಈ ಕೆಳಕಂಡಂತಿದೆ.

**1. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**

ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಧನಸಹಾಯದ ವಿವರವನ್ನು **ಅನುಬಂಧ-6ರಲ್ಲಿ** ಒದಗಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಮಂಡಳಿಯ ಆಯವ್ಯಯದಲ್ಲಿ ಶೈಕ್ಷಣಿಕ ಧನಸಹಾಯಕ್ಕಾಗಿ ಮೀಸಲಿರಿಸಿದ ಹಾಗೂ ವಿತರಿಸಿರುವ ಸಹಾಯಧನದ ವಿವರ ಈ ಕೆಳಕಂಡಂತಿದೆ:

| **ವರ್ಷ** | **ಮಂಡಳಿಯ ಆಯವ್ಯಯದಲ್ಲಿ ಶೈಕ್ಷಣಿಕ ಸಹಾಯ ಧನಕ್ಕಾಗಿ ಮೀಸಲಿರಿಸಿದ ಸಹಾಯ ಧನದ ಮೊತ್ತ (ಕೋಟಿ ರೂ.ಗಳಲ್ಲಿ)** | **ಫಲಾನುಭವಿಗಳ ಸಂಖ್ಯೆ** | **ವಿತರಿಸಿದ ಸಹಾಯ ಧನದ ಮೊತ್ತ (ಕೋಟಿ ರೂ.ಗಳಲ್ಲಿ)** |
|---|---|---|---|
| 2020-21 | 47.50 | 1,15,538 | 86.93 |
| 2021-22 | 100 | 4,32,387 | 669.25 |
| 2022-23 | 400 | 13,81,080 | 91.21 |

ಶೈಕ್ಷಣಿಕ ಧನಸಹಾಯ ವಿತರಿಸಿರುವ ಜಿಲ್ಲಾವಾರು ವಿವರವನ್ನು **ಅನುಬಂಧ-7ರಲ್ಲಿ** ಒದಗಿಸಲಾಗಿದೆ.

2. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**

ಈ ಮಂಡಳಿಯು ನೋಂದಾಯಿತ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್‌ಶಿಪ್ ನೀಡುವ ಯಾವುದೇ ಯೋಜನೆಯನ್ನು ಜಾರಿಗೊಳಿಸುತ್ತಿರುವುದಿಲ್ಲ. ಆದರೆ, "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ"ಯಡಿ, ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಗರಿಷ್ಠ ಇಬ್ಬರು ಮಕ್ಕಳಿಗೆ 1ನೇ ತರಗತಿಯಿಂದ ಪದವಿ ಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

ಮುಂದುವರೆದು, ಶೈಕ್ಷಣಿಕ ಧನ ಸಹಾಯಕ್ಕಾಗಿ ಯಾವುದೇ ಪ್ರತ್ಯೇಕ ಅನುದಾನವನ್ನು ಮೀಸಲಿಟ್ಟಿರುವುದಿಲ್ಲ. ಆದರೆ, ಕಳೆದ 3 ವರ್ಷಗಳಲ್ಲಿ ಶೈಕ್ಷಣಿಕ ಸಹಾಯಧನ ವಿತರಿಸಿದ ಜಿಲ್ಲಾವಾರು ವಿವರ **ಅನುಬಂಧ-08** ರಲ್ಲಿ ಒದಗಿಸಲಾಗಿದೆ. ಮತ್ತು "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ"ಯ ಜಾರಿಗಾಗಿ ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಗೊಳಿಸಿದ ಮತ್ತು ವೆಚ್ಚದ ವಿವರ ಕೆಳಕಂಡಂತಿದೆ.

| **ವರ್ಷ** | **ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)** | **ವೆಚ್ಚ (ರೂ. ಲಕ್ಷಗಳಲ್ಲಿ)** |
|---|---:|---:|
| 2023-24 (ಜನವರಿ ಅಂತ್ಯಕ್ಕೆ) | 833.29 | 789.41 |
| 2022-23 | 476.35 | 869.78 |
| 2021-22 | 1 | 1087.04 |

ಟಿಪ್ಪಣಿ: ಹೆಚ್ಚುವರಿ ವೆಚ್ಚವನ್ನು ಹಿಂದಿನ ಸಾಲಿಗಳಲ್ಲಿ ಬಾಕಿ ಉಳಿದ ಮೊತ್ತದಿಂದ ಬಳಸಿಕೊಳ್ಳಲಾಗಿದೆ.

3. **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:**

ಈ ಮಂಡಳಿಗೆ ಸಂಘಟಿತ ಕಾರ್ಮಿಕರಿಂದ ರೂ.20/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕರಿಂದ ರೂ.40/- ರಂತೆ ಹಾಗೂ ಸರ್ಕಾರದಿಂದ ಪ್ರತಿ ಕಾರ್ಮಿಕರಿಗೆ ರೂ.20/- ರಂತೆ ವಂತಿಗೆಯಾಗಿ ಪಾವತಿಸಲಾಗುತ್ತಿದೆ. ಈ ವಂತಿಗೆಯ ಮೊತ್ತವನ್ನು ಸಂಘಟಿತ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳಡಿ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ನೀಡಲಾಗುತ್ತಿದೆ.

ಕಳೆದ ಮೂರು ವರ್ಷಗಳಲ್ಲಿ ಮೀಸಲಿಟ್ಟಿರುವ, ಬಿಡುಗಡೆಯಾದ ಅಂಶದಾನ ಮತ್ತು ಕಲ್ಯಾಣ ಯೋಜನೆಗಳ ವೆಚ್ಚಗಳ ವಿವರಗಳನ್ನು **ಅನುಬಂಧ-9** ರಲ್ಲಿ ಒದಗಿಸಲಾಗಿದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-10**ರಲ್ಲಿ ಒದಗಿಸಲಾಗಿದೆ.

| | | |
|---|---|---|
| ಈ) | ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನ ಜೀತ ಕಾರ್ಮಿಕರನ್ನು ರಕ್ಷಿಸಲಾಗಿದೆ; ಈ ಪೈಕಿ ಎಷ್ಟು ಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | 2020-21, 2021-22, ಮತ್ತು 2022-23ನೇ ಸಾಲುಗಳಲ್ಲಿ ಬಿಡುಗಡೆಯಾಗಿರುವ ಜೀತಕಾರ್ಮಿಕರ ಒಟ್ಟು ಸಂಖ್ಯೆ:252.<br>ಜಿಲ್ಲಾವಾರು ಪುನರ್ ವಸತಿ ಮಾಹಿತಿ **ಅನುಬಂಧ-11**ರಲ್ಲಿ ಒದಗಿಸಲಾಗಿದೆ. |
| ಉ) | ಈ ಜೀತ ಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸುವ ಸಲುವಾಗಿ ಕಳೆದ ಮೂರು ವರ್ಷಗಳಲ್ಲಿ ಮೀಸಲಿಟ್ಟಿರುವ ಅನುದಾನ ಎಷ್ಟು; ಈ ಪೈಕಿ ಎಷ್ಟು ಅನುದಾನ ಖರ್ಚಾಗಿದೆ; ಇದರ ಅಂಗವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು? | ಜೀತ ವಿಮುಕ್ತರ ತುರ್ತು ಪರಿಹಾರ ಅನುದಾನ/ ಪುನರ್ ವಸತಿ ಅನುದಾನ ಮತ್ತು ಜೀತ ವಿಮುಕ್ತರ ಸಹಾಯ ಧನ ಯೋಜನೆಯಡಿ ಬಿಡುಗಡೆಯಾದ ಅನುದಾನಗಳನ್ನು ಜೀತ ಕಾರ್ಮಿಕರ ತಕ್ಷಣ ತುರ್ತು ಪರಿಹಾರಕ್ಕಾಗಿ ನೀಡಲಾಗುವುದು ಹಾಗೂ ಸಾಮಾಜಿಕ ಭದ್ರತೆ ಒದಗಿಸಲು ಸಹಾಯಧನವನ್ನು ವಿನಿಯೋಗಿಸಲಾಗುವುದು.<br><br>ಅನುದಾನೇತರ ಪುನರ್ವಸತಿ ಸೌಲಭ್ಯಗಳಾದ ವಸತಿ ನಿವೇಶನ, ನರೇಗಾ ಉದ್ಯೋಗ ಚೀಟಿ, ಕೌಶಲ್ಯ ತರಬೇತಿ, ಆರೋಗ್ಯ ಚೀಟಿ ಸೇರಿದಂತೆ ಮುಂತಾದ ಯೋಜನೆಗಳ ಸೌಲಭ್ಯಗಳನ್ನು ಜೀತವಿಮುಕ್ತರಿಗೆ ಆದ್ಯತೆ ಮೇರೆಗೆ ಜಿಲ್ಲಾ ಪಂಚಾಯಿತಿಗಳ ಮುಖೇನ ವಿತರಿಸಲಾಗುತ್ತಿದೆ. ವಿವರಗಳನ್ನು **ಅನುಬಂಧ-12** ರಲ್ಲಿ ಒದಗಿಸಲಾಗಿದೆ. |

**ಕಾಇ 103 ಎಲ್‌ಇಟಿ 2024**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ-1

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276**

| ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತ ಫಲಾನುಭವಿಗಳ ಜಿಲ್ಲಾವಾರು ವಿವರ | | |
|---|---|---|
| ಕ್ರ ಸಂ | ಜಿಲ್ಲೆ | ಸಂಖ್ಯೆ |
| 1 | ಬಾಗಲಕೋಟೆ | 143259 |
| 2 | ಬೆಂಗಳೂರು ಗ್ರಾಮಾಂತರ | 24153 |
| 3 | ಬೆಂಗಳೂರು ನಗರ | 427263 |
| 4 | ಬೆಳಗಾವಿ | 225377 |
| 5 | ಬಳ್ಳಾರಿ | 112164 |
| 6 | ಬೀದರ | 228398 |
| 7 | ವಿಜಯಪುರ | 135246 |
| 8 | ಚಾಮರಾಜನಗರ | 54772 |
| 9 | ಚಿಕ್ಕಬಳ್ಳಾಪುರ | 52752 |
| 10 | ಚಿಕ್ಕಮಗಳೂರು | 101582 |
| 11 | ಚಿತ್ರದುರ್ಗ | 133362 |
| 12 | ದಕ್ಷಿಣ ಕನ್ನಡ | 92272 |
| 13 | ದಾವಣಗೆರೆ | 164697 |
| 14 | ಧಾರವಾಡ | 169170 |
| 15 | ಗದಗ | 103374 |
| 16 | ಕಲಬುರಗಿ | 305949 |
| 17 | ಹಾಸನ | 89014 |
| 18 | ಹಾವೇರಿ | 275785 |
| 19 | ಕೊಡಗು | 8417 |
| 20 | ಕೋಲಾರ | 109532 |
| 21 | ಕೊಪ್ಪಳ | 209302 |
| 22 | ಮಂಡ್ಯ | 38757 |
| 23 | ಮೈಸೂರು | 153368 |
| 24 | ರಾಯಚೂರು | 83050 |
| 25 | ರಾಮನಗರ | 58225 |
| 26 | ಶಿವಮೊಗ್ಗ | 123188 |
| 27 | ತುಮಕೂರು | 115223 |
| 28 | ಉಡುಪಿ | 63195 |
| 29 | ಉತ್ತರ ಕನ್ನಡ | 152439 |
| 30 | ಯಾದಗಿರಿ | 129368 |
| | **ಒಟ್ಟು** | **4082653** |

# ಅನುಬಂಧ-02

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276**

ಮಂಡಳಿಯಲ್ಲಿ ಯೋಜನಾವಾರು ಲಭ್ಯವಿರುವ ಅಸಂಘಟಿತ ಕಾರ್ಮಿಕರ ವಿವರ

| ಕ್ರ.ಸಂ. | ಜಿಲ್ಲೆ | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ | ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ | ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ | ಇ-ಶ್ರಮ್ ಪೋರ್ಟಲ್ ನಡಿ ನೋಂದಣಿ | ಕೋವಿಡ್-19ರ ವಿಶೇಷ ಪ್ಯಾಕೇಜ್ ರಡಿ ಅರ್ಜಿ ಸಲ್ಲಿಸಿದ ಕಾರ್ಮಿಕರು |
|---|---|---|---|---|---|---|
| 1 | ಬಾಗಲಕೋಟೆ | 12775 | 16 | 19015 | 253164 | 38124 |
| 2 | ಬೆಂಗಳೂರು ನಗರ | 33509 | 855 | 286129 | 368006 | 147631 |
| 3 | ಬೆಂಗಳೂರು ಗ್ರಾಮಾಂತರ | 1486 | 24 | 16681 | 160381 | 17525 |
| 4 | ಬೆಳಗಾವಿ | 16473 | 24 | 46747 | 753161 | 151032 |
| 5 | ಬಳ್ಳಾರಿ | 20232 | 51 | 25273 | 408296 | 73260 |
| 6 | ಬೀದರ್ | 4317 | 27 | 25332 | 273731 | 56827 |
| 7 | ವಿಜಯಪುರ | 5062 | 29 | 34008 | 237311 | 34103 |
| 8 | ಚಾಮರಾಜನಗರ | 4628 | 4 | 9743 | 193926 | 30439 |
| 9 | ಚಿಕ್ಕಬಳ್ಳಾಪುರ | 4111 | 16 | 15610 | 199590 | 32634 |
| 10 | ಚಿಕ್ಕಮಗಳೂರು | 4292 | 92 | 10711 | 175029 | 20418 |
| 11 | ಚಿತ್ರದುರ್ಗ | 8638 | 27 | 13457 | 262615 | 37392 |
| 12 | ದಕ್ಷಿಣ-ಕನ್ನಡ | 9617 | 155 | 50475 | 231362 | 31663 |
| 13 | ದಾವಣಗೆರೆ | 15620 | 52 | 20553 | 272280 | 38446 |
| 14 | ಧಾರವಾಡ | 7319 | 21 | 14199 | 281466 | 58486 |
| 15 | ಗದಗ | 5570 | 45 | 13822 | 167404 | 30634 |
| 16 | ಕಲಬುರಗಿ | 9577 | 39 | 27470 | 396996 | 123276 |
| 17 | ಹಾಸನ | 6061 | 38 | 34001 | 251777 | 18587 |
| 18 | ಹಾವೇರಿ | 6662 | 6 | 28757 | 319519 | 44151 |
| 19 | ಕೊಡಗು | 3853 | 42 | 7326 | 50752 | 3792 |
| 20 | ಕೋಲಾರ | 2264 | 27 | 28757 | 217079 | 38967 |
| 21 | ಕೊಪ್ಪಳ | 6421 | 15 | 8488 | 194779 | 46550 |
| 22 | ಮಂಡ್ಯ | 6859 | 4 | 27992 | 276288 | 45058 |
| 23 | ಮೈಸೂರು | 13706 | 193 | 39460 | 393465 | 102344 |
| 24 | ರಾಯಚೂರು | 9822 | 17 | 15343 | 225999 | 48597 |
| 25 | ರಾಮನಗರ | 3391 | 20 | 15903 | 154841 | 17213 |
| 26 | ಶಿವಮೊಗ್ಗ | 8902 | 44 | 22213 | 302060 | 30324 |
| 27 | ತುಮಕೂರು | 14679 | 52 | 27383 | 357928 | 54899 |
| 28 | ಉಡುಪಿ | 6553 | 49 | 22323 | 190067 | 12313 |
| 29 | ಉತ್ತರ-ಕನ್ನಡ | 40692 | 151 | 15714 | 255384 | 40202 |
| 30 | ಯಾದಗಿರಿ | 3633 | 2 | 7291 | 154733 | 28056 |
| 31 | ವಿಜಯನಗರ | | 4 | - | 39047 | - |
| **ಒಟ್ಟು** | | **296724** | **2141** | **840561** (ದತ್ತಾಂಶದ ಪ್ರಕಾರ ಸರ್ಕಾರಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 71539 ಅನ್ನು ಹೊರತುಪಡಿಸಿ) | **8018436** | **1452943** |

# ಅನುಬಂಧ-03

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-276

| ಕ್ರ.ಸಂ. | ಜಿಲ್ಲೆ | ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ-1961 | ಗುತ್ತಿಗೆ ಕಾರ್ಮಿಕ ಕಾಯ್ದೆಗಳ ಕಾಯ್ದೆ | ಬೀಡಿ ಸಿಗಾರ್ ಕಾಯ್ದೆ | ತೋಟ ಕಾರ್ಮಿಕ ಕಾಯ್ದೆ | ಮೋಟಾರ್ ವಾಹನ ಸಾರಿಗೆ ಕಾಯ್ದೆ |
|---|---|---|---|---|---|---|
| | | ಕಾರ್ಮಿಕರ ಸಂಖ್ಯೆ | ಕಾರ್ಮಿಕರ ಸಂಖ್ಯೆ | ಕಾರ್ಮಿಕರ ಸಂಖ್ಯೆ | ಕಾರ್ಮಿಕರ ಸಂಖ್ಯೆ | ಕಾರ್ಮಿಕರ ಸಂಖ್ಯೆ |
| 1 | ಬಾಗಲಕೋಟೆ | 38096 | 7232 | 0 | 0 | 17 |
| 2 | ಬೆಂಗಳೂರು ನಗರ | 4934218 | 1097351 | 0 | 0 | 39726 |
| 3 | ಬೆಂಗಳೂರು ಗ್ರಾಮಾಂತರ | 117788 | 155484 | 0 | 0 | 0 |
| 4 | ಬೆಳಗಾವಿ | 77791 | 59892 | 0 | 148 | 110 |
| 5 | ಬಳ್ಳಾರಿ | 46450 | 58473 | 0 | 0 | 994 |
| 6 | ಬೀದರ್ | 18836 | 9202 | 0 | 0 | - |
| 7 | ವಿಜಯಪುರ | 40968 | 9576 | 0 | 0 | 11 |
| 8 | ಚಾಮರಾಜನಗರ | 10070 | 2806 | 477 | 1339 | - |
| 9 | ಚಿಕ್ಕಬಳ್ಳಾಪುರ | 18735 | 522 | 0 | 0 | - |
| 10 | ಚಿಕ್ಕಮಗಳೂರು | 16398 | 2431 | 14793 | 0 | 145 |
| 11 | ಚಿತ್ರದುರ್ಗ | 21831 | 10044 | 0 | 0 | 353 |
| 12 | ದಕ್ಷಿಣ-ಕನ್ನಡ | 94715 | 64778 | 35505 | 193959 | 2393 |
| 13 | ದಾವಣಗೆರೆ | 46299 | 10708 | 0 | 3999 | 228 |
| 14 | ಧಾರವಾಡ | 81767 | 54649 | 0 | 506 | 44633 |
| 15 | ಗದಗ | 13260 | 2567 | 0 | 0 | - |
| 16 | ಕಲಬುರಗಿ | 34803 | 20010 | 0 | 0 | - |
| 17 | ಹಾಸನ | 66471 | 7825 | 6545 | 0 | 38 |
| 18 | ಹಾವೇರಿ | 19151 | 8350 | 0 | 945 | - |
| 19 | ಕೊಡಗು | 10129 | 830 | 13310 | 0 | 0 |
| 20 | ಕೋಲಾರ | 48947 | 31069 | 0 | 0 | 34 |
| 21 | ಕೊಪ್ಪಳ | 15218 | 24438 | 0 | 0 | - |
| 22 | ಮಂಡ್ಯ | 24078 | 9590 | 0 | 1647 | 20 |
| 23 | ಮೈಸೂರು | 186887 | 40434 | 0 | 0 | 10 |
| 24 | ರಾಯಚೂರು | 25148 | 20318 | 0 | 0 | 63 |
| 25 | ರಾಮನಗರ | 38033 | 55965 | 0 | 190 | 1075 |
| 26 | ಶಿವಮೊಗ್ಗ | 47946 | 41710 | 0 | 974 | 860 |
| 27 | ತುಮಕೂರು | 57245 | 46900 | 0 | 2395 | 8 |
| 28 | ಉಡುಪಿ | 36449 | 40092 | 0 | 38716 | 872 |

| | | | | | | |
|---|---|---|---|---|---|---|
| 29 | ಉತ್ತರ-ಕನ್ನಡ | 27720 | 7350 | 0 | 0 | - |
| 30 | ಯಾದಗಿರಿ | 21275 | 5327 | 0 | 100 | - |
| 31 | ವಿಜಯನಗರ | 22468 | 6279 | 0 | 0 | - |
| ಒಟ್ಟು | | **6259190** | **1912202** | **70630** | **244918** | **91590** |

# ಅನುಬಂಧ-03 (ಅ)

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276

## District Wise Number of Registered Factories

| Sl.No. | District Name | No. of Factory | Male | Female | Total |
|---|---|---|---|---|---|
| 1 | Bangalore Urban | 7901 | 503952 | 293435 | 797387 |
| 2 | Bangalore Rural | 1100 | 101509 | 36224 | 137733.4 |
| 3 | Ramanagara | 506 | 53485 | 21671 | 75156 |
| 4 | Chitradurga | 228 | 5417 | 5853 | 11270 |
| 5 | Davanagere | 269 | 7888 | 2557 | 10445 |
| 6 | Kolar | 420 | 58426 | 16130 | 74556 |
| 7 | Chikkaballapur | 134 | 6523 | 9608 | 16131 |
| 8 | Shivamogga | 297 | 16638 | 11702 | 28340 |
| 9 | Tumakuru | 648 | 33980 | 16500 | 50480 |
| 10 | Chikkamagaluru | 126 | 3385 | 999 | 4384 |
| 11 | Dakshina Kannada | 804 | 38135 | 13697 | 51832 |
| 12 | Udupi | 507 | 21606 | 21899 | 43505 |
| 13 | Hassan | 145 | 11407 | 15184 | 26591 |
| 14 | Madikeri | 68 | 1812 | 1125 | 2937 |
| 15 | Mandya | 173 | 9683 | 11172 | 20855 |
| 16 | Mysore | 723 | 65653 | 22585 | 88238 |
| 17 | Chamarajanagar | 45 | 2672 | 1527 | 4199 |
| 18 | Belagavi | 881 | 67919 | 7905 | 75824 |
| 19 | Bijapur | 119 | 8972 | 1215 | 10187 |
| 20 | Bagalkote | 85 | 16129 | 719 | 16848 |
| 21 | Dharwad | 664 | 44753 | 8753 | 53506 |
| 22 | Gadag | 130 | 4340 | 859 | 5199 |
| 23 | Haveri | 177 | 9707 | 3888 | 13595 |
| 24 | Uttara Kannada | 133 | 13787 | 2917 | 16704 |
| 25 | Ballary | 378 | 48576 | 2681 | 51257 |
| 26 | Bidar | 145 | 8669 | 867 | 9536 |
| 27 | Kalburagi | 178 | 17983 | 1134 | 19117 |
| 28 | Yadgir | 86 | 2110 | 329 | 2439 |
| 29 | Raichur | 420 | 13067 | 3352 | 16419 |
| 30 | Koppal | 225 | 16843 | 1595 | 18438 |
| 31 | Vjayanagara | 81 | 9196 | 501 | 9697 |
| | **Total** | **17796** | **1224222** | **538583** | **1762805** |

## ಅನುಬಂಧ-03 (ಆ)

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276**

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ವಂತಿಕೆ ಪಾವತಿಸುವ ಸಂಘಟಿತ ಕಾರ್ಮಿಕರ ಜಿಲ್ಲಾವಾರು ವಿವರಗಳು**

| Sl. No. | District | No. of Employees |
|---|---|---|
| 1 | Bagalakote | 12141 |
| 2 | Ballari | 52934 |
| 3 | Belagavi | 39829 |
| 4 | Bangaluru Urban | 4277762 |
| 5 | Bangalore R | 109845 |
| 6 | Bidar | 3088 |
| 7 | Chamarajanagar | 2525 |
| 8 | Chikkaballapura | 5913 |
| 9 | Chikkmagalur | 6222 |
| 10 | Chitradurga | 6363 |
| 11 | Dakshina Kannada | 44835 |
| 12 | Davanagere | 8588 |
| 13 | Dharawada | 34941 |
| 14 | Gadaga | 3311 |
| 15 | Hassan | 15654 |
| 16 | Haveri | 5019 |
| 17 | Kalaburgi | 14431 |
| 18 | Kodagu | 9704 |
| 19 | Kolara | 21527 |
| 20 | Koppala | 6328 |
| 21 | Mandya | 18656 |
| 22 | Mysuru | 96077 |
| 23 | Raichur | 3742 |
| 24 | Ramanagara | 21427 |
| 25 | Shivamogga | 26492 |
| 26 | Tumakuru | 27241 |
| 27 | Udupi | 16996 |
| 28 | Uttar Kannada | 9986 |
| 29 | Vijayapura | 9589 |
| 30 | Yadagiri | 513 |
| | **Total** | **4911679** |

ಅನುಬಂಧ

## ಅನುಬಂಧ-04

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276

### 2023–24ನೇ ಸಾಲಿನ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ನಿಗದಿ ಮತ್ತು ಪರಿಷ್ಕರಣೆ ಕುರಿತ ಕನಿಷ್ಠ ಮತ್ತು ಗರಿಷ್ಠ ವೇತನ ದರಗಳ ವಿವರಣೆ

| ಕ್ರ ಸಂ | ಅನುಸೂಚಿತ ಉದ್ದಿಮೆಯ ಹೆಸರು | ಕನಿಷ್ಠ ವೇತನ ದರಗಳು (2023–24) | | | |
|---|---|---|---|---|---|
| | | ದೈನಿಕ | | ಮಾಸಿಕ | |
| | | ಕನಿಷ್ಠ | ಗರಿಷ್ಠ | ಕನಿಷ್ಠ | ಗರಿಷ್ಠ |
| 1 | ಬೇಸಾಯ ಮತ್ತು ಸಂಬಂಧಿತ ಕೆಲಸಗಳಲ್ಲಿ ಉದ್ಯೋಗ | 484.11 | 484.11 | 12586.76 | 12586.76 |
| 2 | ಲಘು ಪಾನೀಯ ಸೋಡಾ ಸಹಿತ ಎಲ್ಲಾ ಇಂಗಾಲಾಮ್ಲಿತ ಪಾನೀಯ, ಮಿನರಲ್ (ಖನಿಜ) ನೀರು ಮತ್ತು ಜ್ಯೂಸ್ (ಹಣ್ಣಿನ ರಸ) ಉತ್ಪಾದನೆ ಹಾಗೂ ಸಂಬಂಧಪಟ್ಟ ಪ್ರಕ್ರಿಯೆಗಳಲ್ಲಿ ಉದ್ಯೋಗ. | 515.94 | 725.65 | 13414.52 | 18866.99 |
| 3 | ಅಗರಬತ್ತಿ ತಯಾರಿಕೆ ಮತ್ತು ಸಾಂಬ್ರಾಣಿ (ಇನ್‌ಸೆನ್ಸ್) ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ | 428.66 | 495.97 | 11145.20 | 12895.20 |
| 4 | ಅಡಿಕೆ (ಸುಪಾರಿ) ಉದ್ದಿಮೆಗಳಲ್ಲಿ ಉದ್ಯೋಗ | 494.11 | 554.79 | 12846.80 | 14424.63 |
| 5 | ಸ್ವಯಂಯಾನ ಯಂತ್ರ ಶಾಸ್ತ್ರ (ಆಟೋಮೊಬೈಲ್ ಇಂಜಿನಿಯರಿಂಗ್) (ಉತ್ಪಾದನೆ, ಅಸೆಂಬ್ಲಿಂಗ್, ಬಾಡಿ ಬಿಲ್ಡಿಂಗ್, ಸರ್ವೀಸಿಂಗ್ ಮತ್ತು ರಿಪೇರಿ ಕೆಲಸಗಳ ಸಹಿತ) | 470.28 | 722.31 | 12227.27 | 18780.05 |
| 6 | ಬೇಕರಿ ಉದ್ದಿಮೆ ಮತ್ತು ಬೇಕಿಂಗ್ ಪ್ರಕ್ರಿಯೆಗಳಲ್ಲಿ ಉದ್ಯೋಗ. | 494.11 | 702.32 | 12846.80 | 18260.20 |
| 7 | ಬೀಡಿ ತಯಾರಿಕೆ ಪ್ರಕ್ರಿಯೆಯಲ್ಲಿ ಉದ್ಯೋಗ | 494.98 | 671.91 | 12869.60 | 17469.60 |

| | | | | | |
|---|---|---|---|---|---|
| 8 | ತಂಬಾಕು ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 9 | ಬಿಸ್ಕತ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 494.11 | 648.39 | 12846.80 | 16858.07 |
| 10 | ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ, ಉಕ್ಕು (ಸ್ಟೀಲ್), ಹಿಂಡಾಲಿಯಮ್ ಪಾತ್ರೆಗಳು ಮತ್ತು ಇತರೆ ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 11 | ಇಟ್ಟಿಗೆ ತಯಾರಿಕೆ ಹಾಗೂ ಪೂರ್ವ ಒತ್ತಡ (ಪ್ರೀ– ಸ್ಟ್ರೆಸ್‌ಡ್) ದೊಂದಿಗೆ ತಯಾರಿಸಿದ ಉತ್ಪನ್ನಗಳ ತಯಾರಿಕೆಯ ಉದ್ದಿಮೆಗಳಲ್ಲಿ ಉದ್ಯೋಗ | 494.11 | 659.99 | 12846.80 | 17159.80 |
| 12 | ಮರದ ಕೆಲಸ [ಕಾರ್ಪೆಂಟರಿ] ಹಾಗೂ ಮರ ಕೊಯ್ಯುವ [ಸಾಮಿಲ್] ಸಂಸ್ಥೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 13 | ಬೆಂಕಿ ಪೊಟ್ಟಣ ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ | ಅನುಸೂಚಿಯಿಂದ ಕೈ ಬಿಡಲಾಗಿದೆ | | | |
| 14 | ಪ್ಲೈವುಡ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 15 | ಮರದ ದಿಮ್ಮಿಗಳ ಘಟಕಗಳಲ್ಲಿ ಉದ್ಯೋಗ. | 470.11 | 663.88 | 12222.98 | 17260.80 |
| 16 | ವಿನೀರ್ ಉದ್ದಿಮೆಗಳಲ್ಲಿ ಉದ್ಯೋಗ | 515.94 | 735.90 | 13414.52 | 19133.45 |
| 17 | ಏಲಕ್ಕಿ ಮಲ್ಲೆಗಳು ಮತ್ತು ಏಲಕ್ಕಿ ತೋಟಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 18 | ಗೋಡಂಬಿ ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ. | 464.98 | 549.98 | 12089.60 | 14299.60 |

| | | | | | |
|---|---|---|---|---|---|
| 19 | ಜೇಡಿ ಮಣ್ಣಿನ ಮಡಿಕೆಗಳು, ಸಿರಾಮಿಕ್ಸ್ ಸ್ಟೋನ್ ವೇರ್ ಮತ್ತು ಇತರೆ ಉತ್ಪನ್ನಗಳ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 516.81 | 722.31 | 13437.05 | 18780.05 |
| 20 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳನ್ನು ಹೊರತುಪಡಿಸಿ) | 408.22 | 442.75 | 10613.60 | 11511.60 |
| 21 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳು) | 399.98 | 404.98 | 10399.60 | 10529.60 |
| 22 | ರಾಸಾಯನಿಕ ರಸಗೊಬ್ಬರ, ಕೀಟ ನಾಶಕ, ಕ್ರಿಮಿನಾಶಕ ಉತ್ಪಾದನಾ ಉದ್ದಿಮೆಯ ಕೆಲಸಗಳಲ್ಲಿ ಯೋಜನೆ | 494.11 | 702.32 | 12846.80 | 18260.20 |
| 23 | ಕ್ಲಬ್‌ಗಳಲ್ಲಿ ಉದ್ಯೋಗ | 515.96 | 711.01 | 13415.00 | 18486.32 |
| 24 | ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಉದ್ಯೋಗ. | 510.95 | 598.25 | 13284.60 | 15554.60 |
| 25 | ಮಿಠಾಯಿ ತಯಾರಿಸುವ (ಕನ್‌ಫೆಕ್ಷನರಿ) ಉದ್ದಿಮೆಗಳಲ್ಲಿ ಉದ್ಯೋಗ. | 494.11 | 648.39 | 12846.80 | 16858.07 |
| 26 | ಹತ್ತಿ ಹೆಕ್ಕುವ, ಅಮಕುವ ಮತ್ತು ಸಂಬಂಧಪಟ್ಟ ಪ್ರಕ್ರಿಯೆಗಳ ಕೆಲಸಗಳಲ್ಲಿ ಉದ್ಯೋಗ. | 477.00 | 534.55 | 12401.88 | 13898.40 |
| 27 | ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಉದ್ಯೋಗ | 489.53 | 689.98 | 12727.88 | 17939.57 |
| 28 | ಗೃಹಕೃತ್ಯ ಸಹಾಯಕರು, ಮಕ್ಕಳ ಪೋಷಣಾ ಸಹಾಯಕರು, ಹೋಮ್ ನರ್ಸ್‌ಗಳ ಸಹಿತ ವಾಸದ ಮನೆಗಳಲ್ಲಿ ಗೃಹ ಕೆಲಸಗಳ ಉದ್ಯೋಗ | 489.70 | 724.46 | 12732.17 | 18835.95 |

| | | | | | |
|---|---|---|---|---|---|
| 29 | ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಲ್ಲಿ ಉದ್ಯೋಗ | 515.94 | 747.62 | 13414.52 | 19437.99 |
| 30 | ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರೋಪ್ಲೇಟಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. | 515.94 | 725.65 | 13414.52 | 18866.99 |
| 31 | ಅನುಸೂಚಿತ ಪಟ್ಟಿಗೆ ಸೇರದ ಉದ್ದಿಮೆಯ ಕೆಲಸದಲ್ಲಿ ಉದ್ಯೋಗ. ಕರ್ನಾಟಕ ರಾಜ್ಯ ತಳ ಹಂತದ ಕನಿಷ್ಠ ವೇತನ. | 494.11 | 702.32 | 12846.80 | 18260.20 |
| 32 | ಇಂಜಿನಿಯರಿಂಗ್, ಪ್ಯಾಬ್ರಿಕೇಷನ್ ಹಾಗೂ ಸಂಬಂಧಪಟ್ಟ ಉದ್ದಿಮೆಯ ಕೆಲಸಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 33 | ಚಲನಚಿತ್ರ (ಸಿನಿಮಾ / ಕಿರು ಚಿತ್ರ) ಉದ್ದಿಮೆಗಳ ನಿರ್ಮಾಣ, ವಿತರಣೆ, ಜಾಹಿರಾತು ಹಾಗೂ ಸಂಬಂಧಪಟ್ಟ ಕೆಲಸಗಳಲ್ಲಿ ಉದ್ಯೋಗ | 470.11 | 683.84 | 12222.98 | 17779.85 |
| 34 | ಮೀನು ಹಿಡಿಯುವುದು, ಮೀನು ಸಂಸ್ಕರಣೆ, ಮೀನು ಪೀಲಿಂಗ್, ಸೀಗಡಿ / ಏಡಿ ಸಂಸ್ಕರಣೆ ಹಾಗೂ ಕಪ್ಪೆ ಕಾಲು ರಫ್ತು ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 543.44 | 708.44 | 14129.52 | 18419.52 |
| 35 | ಆಹಾರ ಸಂಸ್ಕರಣೆ ಮತ್ತು ಆಹಾರ ಪದಾರ್ಥಗಳ ಪ್ಯಾಕಿಂಗ್ (ಸಿದ್ಧ ತಿನಿಸುಗಳು, ಸಿದ್ಧ ಪಾನೀಯ ಹಾಗೂ ಮಸಾಲೆ ಸಹಿತ) ಪ್ರಕ್ರಿಯೆಗಳಲ್ಲಿ ಉದ್ಯೋಗ | 504.93 | 725.65 | 13128.17 | 18866.99 |
| 36 | ಅರಣ್ಯ ಮತ್ತು ಕಟ್ಟಿಗೆ ಡಿಪೋ (ಫಾರೆಸ್ಟ್ರಿ ಮತ್ತು ಟಿಂಬರಿಂಗ್) ಉದ್ದಿಮೆಗಳಲ್ಲಿ ಉದ್ಯೋಗ | 554.79 | 648.39 | 14424.63 | 16858.07 |

| | | | | | |
|---|---|---|---|---|---|
| 37 | ಫೌಂಡ್ರಿ (ಯಂತ್ರಗಳ ಸಹಿತ ಅಥವಾ ರಹಿತ ಮೆಷಿನ್ ಶಾಫ್) ಗಳಲ್ಲಿ ಉದ್ಯೋಗ | 470.28 | 722.31 | 12227.27 | 18780.05 |
| 38 | ಗಾಜು ಮತ್ತು ಗಾಜಿನ ಉತ್ಪನ್ನಗಳ ಸಂಸ್ಥೆಗಳಲ್ಲಿ ಉದ್ಯೋಗ | 475.06 | 677.19 | 12351.68 | 17606.82 |
| 39 | ಗ್ರಾನೈಟ್ ಕಲ್ಲುಗಳು ಹಾಗೂ ಮಾರ್ಬಲ್ ಉದ್ದಿಮೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 40 | ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗ [ಹತ್ತಿ] ಉದ್ದಿಮೆಗಳಲ್ಲಿ ಉದ್ಯೋಗ. | 452.68 | 516.14 | 11769.60 | 13419.60 |
| 41 | ಆಸ್ಪತ್ರೆಗಳು, ಪ್ರಸವಾಲಯಗಳು (ಮೆಟರ್ನಿಟಿ ಹೋಂಗಳು), ಶುಶ್ರೂಷಾಲಯ (ನರ್ಸಿಂಗ್ ಹೋಂಗಳು) ಕ್ಲಿನಿಕ್, ಹಾಗೂ ವ್ಯಸನ ಮುಕ್ತ ಕೇಂದ್ರಗಳಲ್ಲಿ ಉದ್ಯೋಗ | 508.39 | 762.02 | 13218.17 | 19812.50 |
| 42 | ವಸತಿ ನಿಲಯಗಳು (ಹಾಸ್ಟೆಲ್‌ಗಳು), ಅತಿಥಿ ಗೃಹಗಳು, ಹೋಮ್ ಸ್ಟೇಗಳು, ಪೇಯಿಂಗ್ ಗೆಸ್ಟ್ ಸಂಸ್ಥೆಗಳು, ಸರ್ವೀಸ್ಡ್ ಅಪಾರ್ಟ್‌ಮೆಂಟ್‌ಗಳು, ರೆಸಿಡೆಂಟ್ಸ್ ಅಸೋಸಿಯೇಷನ್, ಮದುವೆ ಹಾಗೂ ಸಮುದಾಯ ಭವನಗಳಲ್ಲಿ ಉದ್ಯೋಗ | 515.92 | 735.90 | 13414.00 | 19133.45 |
| 43 | ಹೋಟೆಲ್ / ವಸತಿ ಸಹಿತ ಹೋಟೆಲ್‌ಗಳು, ರೆಸ್ಟೊರೆಂಟ್ ಮೊಟೆಲ್‌ಗಳು, ಲಾಡ್ಜ್‌ಗಳು, ಡಾಬಾಗಳು, ಕ್ಯಾಂಟೀನ್, ಹೊರಾಂಗಣ ಆಹಾರ ತಯಾರಿಕೆ ಹಾಗೂ ಸರಬರಾಜು (ಕೇಟರಿಂಗ್) ಮತ್ತು ಸಂಬಂಧಪಟ್ಟ ಸಂಸ್ಥೆಗಳಲ್ಲಿ ಉದ್ಯೋಗ | 470.11 | 703.81 | 12222.98 | 18298.94 |

| | | | | | |
|---|---|---|---|---|---|
| 44 | ಮಂಜುಗಡ್ಡೆ ಕಾರ್ಖಾನೆ (ಐಸ್ ಫ್ಯಾಕ್ಟರಿ) ಐಸ್ ಕ್ರೀಮ್ ಹಾಗೂ ಶೀತಲ ಸಂರಕ್ಷಣಾ ಸಂಸ್ಥೆಗಳಲ್ಲಿ ಉದ್ಯೋಗ. | 515.94 | 735.90 | 13414.52 | 19133.45 |
| 45 | ಖಂಡಸಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 46 | ಬಟ್ಟೆ ಒಗೆಯುವ, ಡ್ರೈಕ್ಲೀನ್ ಮತ್ತು ಲಾಂಡ್ರಿ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ | 470.11 | 690.50 | 12222.98 | 17952.88 |
| 47 | ಮದ್ಯ ತಯಾರಿಕಾ (ಡಿಸ್ಟಿಲರೀಸ್ ಹಾಗೂ ಬ್ರಿವರೀಸ್), ಬಾಟಲಿಂಗ್ ಹಾಗೂ ಪ್ಯಾಕಿಂಗ್ ಸಹಿತ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ | 515.94 | 725.65 | 13414.52 | 18866.99 |
| 48 | ಆಯುರ್ವೇದ, ಯೋಗ, ಯುನಾನಿ, ಸಿದ್ಧ ಹೋಮಿಯೋಪತಿ (ಆಯುಷ್) ಹಾಗೂ ಅಲೋಪಥಿಕ್ ಔಷಧಿಗಳ ತಯಾರಿಕೆಯಲ್ಲಿ ಉದ್ಯೋಗ. (ಉತ್ಪಾದನೆ, ವಿತರಣೆ ಜಾಹಿರಾತು ವಿಭಾಗಗಳ ಸಹಿತ) | 470.11 | 697.15 | 12222.98 | 18125.91 |
| 49 | ಅಕ್ಕಿ, ಭತ್ತ, ಜೋಳ ಅಥವಾ ಇನ್ನಿತರ ಧಾನ್ಯಗಳಿಂದ ಮಂಡಕ್ಕಿ, ಅವಲಕ್ಕಿ, ಚುರುಮುರಾ, ಮುರುಮುರಾ ಹಾಗೂ ಇತರೆ ಉತ್ಪನ್ನಗಳನ್ನು ತಯಾರಿಸುವ ಉದ್ದಿಮಗಳ ಕೆಲಸದಲ್ಲಿ ಉದ್ಯೋಗ | 494.11 | 648.39 | 12846.80 | 16858.07 |
| 50 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್– [ಫೆರಸ್] ಉದ್ದಿಮೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 51 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. [ನಾನ್–ಫೆರಸ್] | 494.11 | 702.32 | 12846.80 | 18260.20 |

| | | | | | |
|---|---|---|---|---|---|
| 52 | ಲಘು ಸಿಮೆಂಟ್ ಸ್ಥಾವರಗಳಲ್ಲಿ ಉದ್ಯೋಗ. | 515.94 | 718.31 | 13414.52 | 18676.00 |
| 53 | ಮೊಸಾಯಿಕ್ ಹಂಚುಗಳು, ಎಲ್ಲಾ ರೀತಿಯ ನೆಲ ಹಾಸು ಹಂಚುಗಳು, ಹೊಳಪಿನ ಹಂಚುಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 54 | ಎಣ್ಣೆ ಮಿಲ್‌ಗಳಲ್ಲಿ ಉದ್ಯೋಗ. | 515.94 | 715.40 | 13414.50 | 18600.52 |
| 55 | ಪೆಟ್ರೋಲ್, ಡೀಸೆಲ್ ಆಯಿಲ್ ಮತ್ತು ಎಲ್.ಪಿ.ಜಿ. ಪಂಪ್‌ಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 56 | ಪ್ಲಾಸ್ಟಿಕ್, ಪಾಲಿ ಪ್ಲಾಸ್ಟಿಕ್, ರಬ್ಬರ್, ಪಿವಿಸಿ ಪೈಪ್ಸ್ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 517.59 | 725.98 | 13457.36 | 18875.48 |
| 57 | ಮುದ್ರಣ ಹಾಗೂ ಪ್ರಸರಣಾ ಉದ್ದಿಮೆಗಳಲ್ಲಿ ಉದ್ಯೋಗ | 515.94 | 728.58 | 13414.50 | 18943.12 |
| 58 | ಖಾಸಗಿ ವಿತ್ತ ನಿಗಮಗಳು, (ಫೈನಾನ್ಸ್ ಕಾರ್ಪೋರೇಷನ್) ಚಿಟ್ ಫಂಡ್‌ಗಳು ಹಾಗೂ ಕಾನೂನು ಬದ್ಧ ಬ್ಯಾಂಕಿಂಗ್ ರಹಿತ ನಗದು ವಹಿವಾಟು ಸಂಸ್ಥೆಗಳಲ್ಲಿ ಉದ್ಯೋಗ | 517.59 | 725.98 | 13457.36 | 18875.48 |
| 59 | ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ (Scavenging) ಕೆಲಸಗಳಲ್ಲಿ ಉದ್ಯೋಗ. (ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೊರತುಪಡಿಸಿ). | 691.52 | 791.17 | 17979.52 | 20570.50 |
| 60 | ಹಾಲು ಶೇಖರಣೆ, ಸಂಸ್ಕರಣೆ ಹಾಗೂ ವಿತರಣಾ ಪ್ರಕ್ರಿಯೆಯ ಉದ್ದಿಮೆಗಳಲ್ಲಿ ಉದ್ಯೋಗ | 515.94 | 725.65 | 13414.50 | 18866.99 |

| | | | | | |
|---|---|---|---|---|---|
| 61 | ಸಾರ್ವಜನಿಕ ಸಾರಿಗೆ ಸಂಸ್ಥೆಗಳ ಉದ್ದಿಮೆಗಳಲ್ಲಿ ಉದ್ಯೋಗ | 474.43 | 574.43 | 12335.20 | 14935.20 |
| 62 | ಕಾಗದ, ಪಲ್ಪ್ ಕಾಗದ, ರಟ್ಟಿನ ಹಲಗೆ (ಕಾರ್ಡ್‌ಬೋರ್ಡ್), ಹುಲ್ಲಿನ ಹಲಗೆ (ಸ್ಟ್ರಾ ಬೋರ್ಡ್) ಮತ್ತು ನ್ಯೂಸ್ ಪ್ರಿಂಟ್ ಉದ್ದಿಮೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 63 | ಅಕ್ಕಿ, ಧಾನ್ಯಗಳು ಮತ್ತು ಬೇಳೆ ಗಿರಣಿ ಉದ್ದಿಮೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 64 | ರಬ್ಬರ್ ಉತ್ಪನ್ನಗಳು (ಫೋಮ್ ಮತ್ತು ಕಾಯರ್ ರಬ್ಬರ್ ಸಹಿತ) ಉದ್ದಿಮೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 65 | ಔಷಧಿಗಳು, ಗೃಹಪಯೋಗಿ ವಸ್ತುಗಳ ವೃತ್ತಿಪರ ಪ್ರವರ್ತಕ ಮತ್ತು ಮಾರಾಟದಲ್ಲಿ ಉದ್ಯೋಗ | 470.11 | 690.50 | 12222.98 | 17952.88 |
| 66 | ಭದ್ರತಾ ಏಜೆನ್ಸಿಗಳಲ್ಲಿ ಉದ್ಯೋಗ. (ಕಛೇರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಏಜೆನ್ಸಿಯ ಮೂಲಕ ನಿಯೋಜಿಸಿಕೊಳ್ಳುವ ಎಲ್ಲಾ ಸಂಸ್ಥೆಗಳು ಹಾಗೂ ಉದ್ದಿಮೆಗಳ ಸಹಿತ). | 552.61 | 727.99 | 14367.96 | 18927.63 |
| 67 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ–1 | 494.11 | 648.39 | 12846.80 | 16858.07 |
| 68 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ–2 | 494.11 | 702.32 | 12846.80 | 18260.20 |
| 69 | ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 70 | ಸ್ಪಿನ್ನಿಂಗ್ ಮಿಲ್ ಉದ್ದಿಮೆಗಳಲ್ಲಿ ಉದ್ಯೋಗ | 444.32 | 481.41 | 11552.22 | 12516.63 |

| | | | | | |
|---|---|---|---|---|---|
| 71 | ಸ್ಪನ್ ಪೈಪುಗಳು, ಕಾಂಕ್ರೀಟ್ ಪೈಪುಗಳು, ಸಾನಿಟರಿ ಫಿಟ್ಟಿಂಗ್‌ಗಳು, ಪ್ಲೈನ್ ಸಿಮೆಂಟ್ ಕಾಂಕ್ರೀಟ್ (ಪಿ.ಸಿ.ಸಿ.) ಹಾಗೂ ರೀ-ಇನ್‌ಫೋರ್ಸ್‌ಡ್ ಸಿಮೆಂಟ್ ಕಾಂಕ್ರೀಟ್ (ಆರ್.ಸಿ.ಸಿ). ಪೈಪುಗಳು ಮತ್ತು ಕಂಬಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 470.11 | 703.81 | 12222.98 | 18298.94 |
| 72 | ಲೋಹದ ಅಲ್ಮೇರಾಗಳು, ಕುರ್ಚಿಗಳು, ಮೇಜುಗಳು ಹಾಗೂ ಇತರೆ ಪೀಠೋಪಕರಣಗಳನ್ನು ಉತ್ಪಾದಿಸುವ ಉದ್ದಿಮೆಗಳಲ್ಲಿ ಉದ್ಯೋಗ | 470.11 | 703.81 | 12222.98 | 18298.94 |
| 73 | ಕಲ್ಲು ಒಡೆಯುವುದು ಮತ್ತು ಕಲ್ಲು ಪುಡಿ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 494.11 | 648.39 | 12846.80 | 16858.07 |
| 74 | ಚರ್ಮ ಹದ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | ಅನುಸೂಚಿಯಿಂದ ಕೈ ಬಿಡಲಾಗಿದೆ | | | |
| 75 | ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ | 432.46 | 477.31 | 11243.94 | 12409.98 |
| 76 | ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ | 511.62 | 618.32 | 13302.22 | 16076.19 |
| 77 | ಹೆಂಚು ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ | 494.11 | 648.39 | 12846.80 | 16858.07 |
| 78 | ಶೇಂದಿ ಇಳಿಸುವ ಉದ್ದಿಮೆಗಳಲ್ಲಿ ಉದ್ಯೋಗ | 494.11 | 648.39 | 12846.80 | 16858.07 |

| | | | | | |
|---|---|---|---|---|---|
| 79 | ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಉದ್ಯೋಗ | 554.44 | 749.90 | 14415.52 | 19497.52 |
| 80 | ಸಹಕಾರ ಸೊಸೈಟಿಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 81 | ಚಿನ್ನ ಮತ್ತು ಬೆಳ್ಳಿ ಆಭರಣಗಳ ತಯಾರಿಕೆ ಮತ್ತು ಹರಳುಗಳು, ವಜ್ರಗಳನ್ನು ಕತ್ತರಿಸುವುದು, ಹೊಳಪು ಗೊಳಿಸುವ ಉದ್ದಿಮೆಗಳಲ್ಲಿ ಉದ್ಯೋಗ | 494.11 | 702.32 | 12846.80 | 18260.20 |
| 82 | ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಹಾಕುವ ಉದ್ದಿಮೆಗಳಲ್ಲಿ ಉದ್ಯೋಗ | 463.61 | 532.09 | 12053.73 | 13834.46 |
| 83 | ಸರಕು ಸಾಮಗ್ರಿಗಳ ಹೇರುವ ಮತ್ತು ಇಳಿಸುವ (ಲೋಡಿಂಗ್ ಮತ್ತು ಅನ್‌ಲೋಡಿಂಗ್) ಕೆಲಸಗಳಲ್ಲಿ ಉದ್ಯೋಗ | ತುಂಡು ಆಧಾರ | | | |

## ಅನುಬಂಧ-05

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276**

**ಮಂಡಳಿಯ ವತಿಯಿಂದ ಅನುಷ್ಠಾನಗೊಳಿಸಿರುವ ಸೌಲಭ್ಯಗಳು ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಮತ್ತುಅವರ ಅವಲಂಭಿತರಿಗೆ ಸಹಾಯಧನ ನೀಡಲು ಈ ಕೆಳಕಂಡ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ:**

1. **ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ. 3,000/-**
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ/ಪತ್ನಿಗೆ ಮಾಸಿಕ **ರೂ.1500/-**
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ /ಭಾಗಶಃ ಅಂಗ ವಿಕಲತೆ ಹೊಂದಿದ್ದರೆ ಮಾಸಿಕ **ರೂ. 2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ. 2,00,000/-** ದವರೆಗೆ ಅನುಗ್ರಹರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ** ಮರುಪಾವತಿ ಸೌಲಭ್ಯ (ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
5. **ಟ್ರೈನಿಂಗ್-ಕಮ್-ಟೂಲ್‌ಕಿಟ್ಸ್ ಸೌಲಭ್ಯ (ಶ್ರಮ ಸಾಮರ್ಥ್ಯ): ರೂ. 20,000/- ವರೆಗೆ**
6. **ವಸತಿ ಸೌಲಭ್ಯ (ಕಾರ್ಮಿಕ ಗೃಹಭಾಗ್ಯ): ರೂ.2,00,000/-** ದವರೆಗೆ ಮುಂಗಡ ಸೌಲಭ್ಯ
7. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ ರೂ. 50,000/-
8. **ಅಂತ್ಯಕ್ರಿಯೆ ವೆಚ್ಚ:ರೂ. 4,000/-** ಹಾಗೂ ಅನುಗ್ರಹ ರಾಶಿ **ರೂ. 71,000/-** ಸಹಾಯಧನ
9. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:**

| ಕ್ರ ಸಂ | ವಿದ್ಯಾಭ್ಯಾಸದ ವಿವರ (ತರಗತಿ ಅಥವಾ ಕೋರ್ಸ್ ಅಥವಾ ಗ್ರೇಡ್) | ವಾರ್ಷಿಕ ಶೈಕ್ಷಣಿಕ ಸಹಾಯಧನ □□□□□ (ರೂ. ಗಳಲ್ಲಿ) |
|---|---|---|
| 1 | 1 ರಿಂದ 5 ನೇ ತರಗತಿ | 1,100 |
| 2 | 6 ರಿಂದ 7 ನೇ ತರಗತಿ | 1,250 |
| 3 | 8 ನೇ ತರಗತಿ | 1,350 |
| 4 | 9 ಹಾಗೂ 10ನೇ ತರಗತಿ | 3,000 |
| 5 | ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ | 4,600 |
| 6 | ಪದವಿ | 6,000 |
| 7 | ಬಿಇ / ಬಿ.ಟೆಕ್ ಅಥವಾ ಸಂಬಂಧಪಟ್ಟ ಯೂಜಿ ಕೋರ್ಸ್ | 10,000 |
| 8 | ಸ್ನಾತಕೋತ್ತರ ಪದವಿ | 10,000 |
| 9 | ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ | 4,600 |

| ಕ್ರ ಸಂ | ವಿದ್ಯಾಭ್ಯಾಸದ ವಿವರ (ತರಗತಿ ಅಥವಾ ಕೋರ್ಸ್ ಅಥವಾ ಗ್ರೇಡ್) | ವಾರ್ಷಿಕ ಶೈಕ್ಷಣಿಕ ಸಹಾಯಧನ □□□□□ (ರೂ. ಗಳಲ್ಲಿ) |
|---|---|---|
| 10 | ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್/ ಅಕ್ಸುಲರಿನರ್ಸಿಂಗ್ ಆಂಡ್ ಮಿಡ್ವೈಫ್ | 10,000 |
| 11 | ಬಿ.ಎಡ್ | 6,000 |
| 12 | ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್ ಎಸ್/ ಬಿಡಿಎಸ್/ ಬಿಹೆಚ್‌ಎಮ್ ಎಸ್ ಕೋರ್ಸ್ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್ | 11,000 |
| 13 | ಎಲ್‌ಎಲ್ ಬಿ/ಎಲ್ ಎಲ್ ಎಂ | 10,000 |
| 14 | ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್) | 10,000 |
| 15 | ಎಮ್‌ಡಿ ಮೆಡಿಕಲ್ | 12,000 |
| 16 | ಡಿ.ಎಡ್ | 4,600 |
| 17 | ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ) | 11,000 |
| 18 | ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್ ಇಆರ್/ಎಐಐಎಮ್‌ಎಸ್/ಎನ್‌ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸುಗಳು. | 11,000 |

10. **ವೈದ್ಯಕೀಯ ಸಹಾಯ ಧನ (ಕಾರ್ಮಿಕ ಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ **ರೂ. 300/- ರಿಂದ ರೂ. 20,000/-**ವರೆಗೆ

11. **ಅಪಘಾತ ಪರಿಹಾರ:** ನೊಂದಾಯಿತ ಕಟ್ಟಡ ಕಾರ್ಮಿಕರು ಮರಣ ಹೊಂದಿದ್ದಲ್ಲಿ **ರೂ. 5,00,000/-**ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ. 2,00,000/-**

12. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ)**: ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರಪಿಂಡದಲ್ಲಿನ ಕಲ್ಲುತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ , ಕಿಡ್ನಿಶಸ್ತ್ರ ಚಿಕಿತ್ಸೆ, ಇ.ಎನ್.ಟಿ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆಮುರಿತ/ ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-ವರೆಗೆ**

13. **ಮದುವೆ ಸಹಾಯ ಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ **ತಲಾ ರೂ.60,000/-**

14. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ **ರೂ. 6,000/- ಗಳ** ಸಹಾಯಧನ.

# ಅನುಬಂಧ-06

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276**

**ಮಂಡಳಿವತಿಯಿಂದ ದಿನಾಂಕ: 30-10-2023 ರಂದು ಪರಿಷ್ಕರಿಸಿದ ಶೈಕ್ಷಣಿಕ ಸಹಾಯಧನದ (ಕಲಿಕೆ ಭಾಗ್ಯ) (ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ) ವಿವರ**

| ಕ್ರ ಸಂ | ವಿದ್ಯಾಭ್ಯಾಸದ ವಿವರ(ತರಗತಿ ಅಥವಾ ಕೋರ್ಸ್ ಅಥವಾ ಗ್ರೇಡ್) | ವಾರ್ಷಿಕ ಶೈಕ್ಷಣಿಕ ಸಹಾಯಧನದ ಮೊತ್ತ (ರೂ. ಗಳಲ್ಲಿ) |
|---|---|---|
| 1 | 1 ರಿಂದ 5 ನೇ ತರಗತಿ | **1100** |
| 2 | 6 ರಿಂದ 7 ನೇ ತರಗತಿ | **1250** |
| 3 | 8 ನೇ ತರಗತಿ | **1350** |
| 4 | 9 ಹಾಗೂ 10ನೇ ತರಗತಿ | **3000** |
| 5 | ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ | **4600** |
| 6 | ಪದವಿ | **6000** |
| 7 | ಬಿಇ / ಬಿ.ಟೆಕ್ ಅಥವಾ ಸಂಬಂಧಪಟ್ಟ ಯೂಜಿ ಕೋರ್ಸ್ | **10000** |
| 8 | ಸ್ನಾತಕೋತ್ತರ ಪದವಿ | **10000** |
| 9 | ಪಾಲಿಟೆಕ್ನಿಕ್ / ಡಿಪ್ಲೋಮಾ/ ಐಟಿಐ | **4600** |
| 10 | ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪ್ಯಾರಾ ಮೆಡಿಕಲ್ ಕೋರ್ಸ್ / ಎಕ್ಸೂಲರಿ ನರ್ಸಿಂಗ್ ಆಂಡ್ ಮಿಡ್ವೈಫ್ | **10000** |
| 11 | ಬಿ.ಎಡ್ | **6000** |
| 12 | ವೈದ್ಯಕೀಯ (ಎಮ್‌ಬಿಬಿಎಸ್/ ಬಿಎಎಮ್ ಎಸ್/ ಬಿಡಿಎಸ್/ ಬಿಹೆಚ್‌ಎಮ್ ಎಸ್ ಕೋರ್ಸ್ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್ | **11000** |
| 13 | ಎಲ್‌ಎಲ್ ಬಿ/ಎಲ್ ಎಲ್ ಎಂ | **10000** |
| 14 | ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್) | **10000** |
| 15 | ಎಮ್‌ಡಿ ಮೆಡಿಕಲ್ | **12000** |
| 16 | ಡಿ.ಎಡ್ | **4600** |
| 17 | ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ) | **11000** |
| 18 | ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ ಎಐಐಎಮ್‌ಎಸ್/ ಎನ್‌ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸುಗಳು. | **11000** |

# ಅನುಬಂಧ-07

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276

## ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಮಂಡಳಿಯ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ವಿತರಿಸಿರುವ ಶೈಕ್ಷಣಿಕ ಧನಸಹಾಯದ ವಿವರ

| ಕ್ರ ಸಂ | ಜಿಲ್ಲೆ | 2020-21 | | 2021-22 | | 2022-23 | |
|---|---|---|---|---|---|---|---|
| | | ಫಲಾನುಭವಿಗಳ ಸಂಖ್ಯೆ. | ವಿತ್ತರಿಸಿದ ಸಹಾಯ ಧನದ ಮೊತ್ತ (ರೂ.ಗಳಲ್ಲಿ) | ಫಲಾನುಭವಿಗಳ ಸಂಖ್ಯೆ. | ವಿತ್ತರಿಸಿದ ಸಹಾಯ ಧನದ ಮೊತ್ತ (ರೂ.ಗಳಲ್ಲಿ) | ಫಲಾನುಭವಿಗಳ ಸಂಖ್ಯೆ. | ವಿತ್ತರಿಸಿದ ಸಹಾಯ ಧನದ ಮೊತ್ತ (ರೂ.ಗಳಲ್ಲಿ) |
| 1 | ಬೆಂಗಳೂರು | 9392 | 88659000 | 29451 | 658286000 | 53621 | 35377900 |
| 2 | ಬಾಗಲಕೋಟೆ | 2707 | 17929000 | 11005 | 207744000 | 62099 | 41023500 |
| 3 | ಬೆಳಗಾವಿ | 4242 | 24909000 | 12020 | 329704000 | 86008 | 57787200 |
| 4 | ಬಳ್ಳಾರಿ | 5677 | 45855000 | 30642 | 260008000 | 45362 | 28423900 |
| 5 | ಬೀದರ | 2019 | 12947090 | 20606 | 386211000 | 73763 | 50744350 |
| 6 | ವಿಜಯಪುರ | 1492 | 10122000 | 8904 | 149086000 | 38368 | 25595000 |
| 7 | ಚಾಮರಾಜನಗರ | 1219 | 12975000 | 7557 | 100591000 | 25198 | 17251050 |
| 8 | ಚಿಕ್ಕಬಳ್ಳಾಪುರ | 809 | 8881000 | 6050 | 85155000 | 19318 | 13049400 |
| 9 | ಚಿಕ್ಕಮಗಳೂರು | 5467 | 50832000 | 23490 | 162377000 | 40467 | 26248250 |
| 10 | ಚಿತ್ರದುರ್ಗ | 6082 | 45307000 | 18871 | 235754000 | 55176 | 35063450 |
| 11 | ದಾವಣಗೆರೆ | 6863 | 30912000 | 16919 | 261293000 | 61787 | 37032850 |
| 12 | ಗದಗ | 1022 | 7238000 | 10659 | 147774000 | 36592 | 24546700 |
| 13 | ಹಾಸನ | 7464 | 81887770 | 17244 | 269985000 | 38668 | 25274700 |
| 14 | ಹಾವೇರಿ | 5033 | 36697580 | 26821 | 343248000 | 99608 | 64028400 |
| 15 | ಹುಬ್ಬಳ್ಳಿ | 3921 | 17605000 | 18585 | 273017000 | 64613 | 42131550 |
| 16 | ಕಲಬುರಗಿ | 12558 | 61339000 | 19879 | 523366000 | 87766 | 60435200 |
| 17 | ಉತ್ತರ ಕನ್ನಡ | 4428 | 30455090 | 8680 | 176874000 | 66030 | 43028550 |
| 18 | ಕೋಲಾರ | 3451 | 27672000 | 14191 | 148538000 | 40299 | 25808000 |
| 19 | ಕೊಪ್ಪಳ | 2756 | 13108000 | 15315 | 205261000 | 69824 | 46001000 |
| 20 | ಮಡಿಕೇರಿ | 79 | 1037000 | 1628 | 24929000 | 3293 | 2314700 |
| 21 | ಮಂಡ್ಯ | 1350 | 11896000 | 7467 | 139691000 | 15746 | 10285550 |
| 22 | ದಕ್ಷಿಣ ಕನ್ನಡ | 5337 | 34019000 | 14367 | 230238000 | 39588 | 27288950 |
| 23 | ಮೈಸೂರು | 1254 | 11866000 | 19862 | 354023000 | 59656 | 41173350 |
| 24 | ರಾಯಚೂರು | 2341 | 22217000 | 9176 | 127716000 | 22741 | 14846700 |
| 25 | ರಾಮನಗರ | 993 | 9355000 | 7364 | 109307000 | 17056 | 11244200 |
| 26 | ಶಿವಮೊಗ್ಗ | 6711 | 60238000 | 20594 | 316605000 | 54337 | 34984300 |
| 27 | ತುಮಕೂರು | 4504 | 39440900 | 11915 | 203779000 | 38558 | 25193900 |
| 28 | ಉಡುಪಿ | 2879 | 26876000 | 9358 | 133313000 | 24085 | 17121500 |
| 29 | ಯಾದಗಿರಿ | 3488 | 27091000 | 13277 | 125117000 | 41453 | 28884000 |
| ಒಟ್ಟು | | 1,15,538 | 86,93,66,430 | 4,32,387 | 669,25,19,000 | 13,81,080 | 91,21,88,100 |

# ಅನುಬಂಧ-08

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276**

**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವತಿಯಿಂದ ಕಳೆದ 3 ವರ್ಷಗಳಲ್ಲಿ ಒದಗಿಸಲಾದ ಶೈಕ್ಷಣಿಕ ಧನಸಹಾಯದ ವಿವರ**

| ಕ್ರ. ಸಂ | ಜಿಲ್ಲೆ | 2021-22 | 2022-23 | 2023-24 | ಒಟ್ಟು |
|---|---|---|---|---|---|
| 1 | ಬಾಗಲಕೋಟೆ | 11 | 13 | 8 | 32 |
| 2 | ಬಳ್ಳಾರಿ | 20 | 21 | 8 | 49 |
| 3 | ಬೆಂಗಳೂರು | 46 | 47 | 28 | 121 |
| 4 | ಬೆಳಗಾವಿ | 6 | 6 | 4 | 16 |
| 5 | ಬೆಂಗಳೂರು ಗ್ರಾಮಾಂತರ | 4 | 2 | | 6 |
| 6 | ಬೀದರ್ | 2 | 3 | 2 | 7 |
| 7 | ಚಾಮರಾಜನಗರ | | | | 0 |
| 8 | ಚಿಕ್ಕಬಳ್ಳಾಪುರ | 3 | 5 | 2 | 10 |
| 9 | ಚಿಕ್ಕಮಗಳೂರು | 5 | 4 | 3 | 12 |
| 10 | ಚಿತ್ರದುರ್ಗ | 10 | 15 | 11 | 36 |
| 11 | ದಕ್ಷಿಣ ಕನ್ನಡ | 14 | 17 | 12 | 43 |
| 12 | ದಾವಣಗೆರೆ | 13 | 12 | 6 | 31 |
| 13 | ಗದಗ | 2 | 4 | 2 | 8 |
| 14 | ಹಾಸನ | 6 | 6 | 9 | 21 |
| 15 | ಹಾವೇರಿ | 15 | 18 | 12 | 45 |
| 16 | ಧಾರವಾಡ | 2 | 3 | 3 | 8 |
| 17 | ಕಲಬುರಗಿ | 1 | 2 | 4 | 7 |
| 18 | ಕೊಡಗು | 4 | 7 | 7 | 18 |
| 19 | ಕೋಲಾರ | 4 | 4 | 2 | 10 |
| 20 | ಕೊಪ್ಪಳ | 5 | 10 | 8 | 23 |
| 21 | ಮಂಡ್ಯ | 6 | 6 | 7 | 19 |
| 22 | ಮೈಸೂರು | 12 | 12 | 11 | 35 |
| 23 | ರಾಮನಗರ | 15 | 17 | 1 | 33 |
| 24 | ರಾಯಚೂರು | 6 | 6 | 2 | 14 |
| 25 | ಶಿವಮೊಗ್ಗ | 9 | 9 | 7 | 25 |
| 26 | ತುಮಕೂರು | 11 | 13 | 14 | 38 |
| 27 | ಉಡುಪಿ | 9 | 10 | 10 | 29 |
| 28 | ಉತ್ತರಕನ್ನಡ | 4 | 2 | 2 | 8 |
| 29 | ವಿಜಯನಗರ | 4 | 2 | 7 | 13 |
| 30 | ವಿಜಯಪುರ | 7 | 6 | 4 | 17 |
| | ಒಟ್ಟು | 256 | 282 | 196 | 734 |

**Benefit Rs.10,000/- each**

# ಅನುಬಂಧ-09

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276**

**2020-21 ರಿಂದ 2022-23 ರವರೆಗೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಅಂಶದಾನ ಹಾಗೂ ಕಲ್ಯಾಣ ಯೋಜನೆಗಳ ವೆಚ್ಚಗಳ ವಿವರಗಳು ಈ ಕೆಳಕಂಡಂತಿದೆ.**

| ಕ್ರ.ಸಂ. | ವರ್ಷ | ನಿಗದಿಪಡಿಸಿದ ವಾರ್ಷಿಕ ಅಂಶದಾನ (ರೂ. ಲಕ್ಷಗಳಲ್ಲಿ) | ಬಿಡುಗಡೆಯಾದ ವಾರ್ಷಿಕ ಅಂಶದಾನ (ರೂ. ಲಕ್ಷಗಳಲ್ಲಿ) | ವೆಚ್ಚಗಳು (ರೂ. ಗಳಲ್ಲಿ) |
|---|---|---|---|---|
| 1. | 2020-21 | 600.00 | 600.00 | 6,28,16,000 |
| 2. | 2021-22 | 600.00 | 600.00 | 5,01,51,000 |
| 3. | 2022-23 | 500.00 | 500.00 | 13,40,47,381 |

ಟಿಪ್ಪಣಿ: ಹೆಚ್ಚುವರಿ ವೆಚ್ಚವನ್ನು ಮಂಡಳಿಯ ಕಲ್ಯಾಣ ನಿಧಿಯಿಂದ ಪಾವತಿಸಲಾಗಿದೆ.

# ಅನುಬಂಧ-10

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:276**

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದ ಕಲ್ಯಾಣ ಯೋಜನೆಗಳಡಿಯಲ್ಲಿ ಸಂಘಟಿತ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ನೀಡಿರುವ ಜಿಲ್ಲಾವಾರು ಫಲಾನುಭವಿಗಳ ವಿವರ.**

| ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ | | | | | | | | |
|---|---|---|---|---|---|---|---|---|
| | | 2020-21 | | 2021-22 | | 2022-23 | | |
| ಕ್ರ. ಸಂ. | ಜಿಲ್ಲೆಗಳು | ಫಲಾನು ಭವಿಗಳು | ಮೊತ್ತ | ಫಲಾನುಭವಿ ಗಳು | ಮೊತ್ತ | ಫಲಾನು ಭವಿಗಳು | ಮೊತ್ತ | ಷರಾ |
| 1 | ಬೆಂಗಳೂರು ನಗರ | 4338 | 2,06,12,000 | 3464 | 15324000 | 4333 | 3,8154,000 | ಮಂಡಳಿಯ ನಿಧಿಯಿಂದ ಭರಿಸಲಾಗಿದೆ |
| 2 | ಬೆಂಗಳೂರು (ಗ್ರಾ) | 509 | 20,20,000 | 441 | 2092000 | 681 | 51,98,000 | |
| 3 | ದಕ್ಷಿಣ ಕನ್ನಡ | 1041 | 49,80,000 | 908 | 3942000 | 1138 | 99,22,000 | |
| 4 | ತುಮಕೂರು | 886 | 35,44,000 | 775 | 3081000 | 1188 | 91,01,000 | |
| 5 | ಉಡುಪಿ | 2988 | 1,19,67,000 | 2390 | 9129000 | 2205 | 1,56,48,000 | |
| 6 | ಬೆಳಗಾಂ | 684 | 27,67,000 | 493 | 2067000 | 674 | 56,91,000 | |
| 7 | ಮಂಡ್ಯ | 432 | 19,58,000 | 308 | 1282000 | 725 | 51,41,000 | |
| 8 | ಮೈಸೂರು | 636 | 29,72,000 | 540 | 2298000 | 1345 | 1,08,65,000 | |
| 9 | ರಾಮನಗರ | 212 | 8,92,000 | 114 | 492000 | 362 | 26,60,000 | |
| 10 | ಚಿಕ್ಕಬಳ್ಳಾಪುರ | 104 | 5,01,000 | 21 | 116000 | 428 | 27,53,000 | |
| 11 | ಶಿವಮೊಗ್ಗ | 595 | 23,50,000 | 427 | 1687000 | 914 | 69,50,000 | |
| 12 | ಹಾಸನ | 398 | 17,14,000 | 289 | 1195000 | 292 | 24,57,000 | |
| 13 | ಧಾರವಾಡ | 84 | 4,08,000 | 44 | 225000 | 191 | 18,04,000 | |
| 14 | ದಾವಣಗೆರೆ | 100 | 4,61,000 | 121 | 537000 | 201 | 16,51,000 | |
| 15 | ಚಿತ್ರದುರ್ಗ | 21 | 82,000 | 16 | 56000 | 37 | 2,78,000 | |
| 16 | ಉತ್ತರ ಕನ್ನಡ | 48 | 1,94,000 | 24 | 116000 | 99 | 6,95,000 | |
| 17 | ಚಿಕ್ಕಮಗಳೂರು | 43 | 1,98,000 | 31 | 156000 | 93 | 6,50,000 | |
| 18 | ಬಾಗಲಕೋಟೆ | 54 | 2,09,000 | 28 | 114000 | 111 | 7,60,000 | |
| 19 | ಕೊಡಗು | 25 | 1,20,000 | 9 | 64000 | 27 | 2,19,000 | |
| 20 | ಗದಗ | 26 | 1,18,000 | 11 | 45000 | 28 | 1,88,000 | |
| 21 | ಕೋಲಾರ | 319 | 13,26,000 | 173 | 664000 | 378 | 27,31,000 | |
| 22 | ವಿಜಯಪುರ | 20 | 1,07,000 | 6 | 42000 | 33 | 3,20,000 | |
| 23 | ಹಾವೇರಿ | 99 | 3,52,000 | 82 | 280000 | 130 | 8,73,000 | |
| 24 | ಕಲಬುರ್ಗಿ | 5 | 31,000 | 1 | 10000 | 2 | 26,000 | |
| 25 | ಬೀದರ್ | 6 | 26,000 | 2 | 8000 | 7 | 54,000 | |

| | | | | | | | | |
|---|---|---|---|---|---|---|---|---|
| 26 | ಬಳ್ಳಾರಿ | 5 | 22,000 | 3 | 25000 | 10 | 1,03,000 | |
| 27 | ಕೊಪ್ಪಳ | 20 | 80,000 | 11 | 48000 | 5 | 34,000 | |
| 28 | ರಾಯಚೂರು | 2 | 6,000 | 2 | 7000 | 4 | 21,000 | |
| 29 | ಯಾದಗಿರಿ | 0 | 0 | 0 | 0 | 0 | 0 | |
| 30 | ಚಾಮರಾಜನಗರ | 29 | 1,31,000 | 11 | 74000 | 16 | 1,68,000 | |
| 31 | ವಿಜಯನಗರ | 0 | 0 | 0 | 0 | 0 | 0 | |
| | **ಒಟ್ಟು** | **13,729** | 6,01,48,000 | **10745** | 4,51,76,000 | **15657** | 12,51,15,000 | |

## ಅನುಬಂಧ-11

2020-23ರವರೆಗೂ ಬಿಡುಗಡೆಗೊಂಡು , ಪುನರ್ವಸತಿ ಅನುದಾನ ವಿತರಿಸಿರುವ ಜೀತವಿಮುಕ್ತರ ವಿವರ

| ಕ್ರ.ಸಂ | ಜಿಲ್ಲೆ ಹೆಸರು | ಬಿಡುಗಡೆಯಾದ ಜೀತವಿಮುಕ್ತರ ಸಂಖ್ಯೆ | ಪುನರ್ವಸತಿ ಅನುದಾನ ಪಡೆದಿರುವ ಜೀತವಿಮುಕ್ತರ ಸಂಖ್ಯೆ |
|---|---|---|---|
| 1. | ಬೆಂಗಳೂರು(ನಗರ) | 21 | 12 |
| 2. | ಕೋಲಾರ | 25 | 25 |
| 3. | ಹಾಸನ | 54 | 54 |
| 4. | ರಾಮನಗರ | 01 | 01 |
| 5. | ಮೈಸೂರು | 31 | 31 |
| 7. | ಶಿವಮೊಗ್ಗ | 58 | 39 |
| 8. | ಚಿಕ್ಕಬಳ್ಳಾಪುರ | 02 | 02 |
| 9. | ಬೆಳಗಾವಿ | 07 | 04 |
| 11. | ಮಂಡ್ಯ | 08 | 08 |
| 12. | ಗದಗ | 28 | 28 |
| ಒಟ್ಟು | | 235 | 204 |

ನಿರ್ದೇಶಕರು ಆಡಳಿತ-2
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ

# ಅನುಬಂಧ-2

ಜೀತವಿಮುಕ್ತರ ಪುನರ್ವಸತಿಗೆ ಇರುವ ಲೆಕ್ಕ ಶಿರ್ಷಿಕೆಗಳು, 3 ವರ್ಷಗಳ ಆಯವ್ಯಯ ಹಂಚಿಕೆ ಹಾಗೂ ವೆಚ್ಚ

**ಲೆಕ್ಕ ಶೀರ್ಷಿಕೆ- 2230-01-112-0-01(059)- ಜೀತವಿಮುಕ್ತರ ತುರ್ತು ಪರಿಹಾರ ಅನುದಾನ/ಪುನರ್ವಸತಿ ಅನುದಾನ.**

(ರೂ.ಲಕ್ಷಗಳಲ್ಲಿ)

| ವರ್ಷ | ಆಯವ್ಯಯ ಹಂಚಿಕೆ | ವೆಚ್ಚ |
|---|---|---|
| 2020-21 | 300.00 | 300.00 |
| 2021-22 | 300.00 | 293.00 |
| 2022-23 | 300.00 | 300.00 |
| **ಒಟ್ಟು** | **900.00** | **893.00** |

**ಲೆಕ್ಕ ಶೀರ್ಷಿಕೆ- 2230-01-198-6-01(300)- ಜೀತವಿಮುಕ್ತರ ಸಹಾಯಧನ ಯೋಜನೆ**

(ರೂ.ಲಕ್ಷಗಳಲ್ಲಿ)

| ವರ್ಷ | ಆಯವ್ಯಯ ಹಂಚಿಕೆ | ವೆಚ್ಚ |
|---|---|---|
| 2020-21 | 422.00 | 171.24 |
| 2021-22 | 422.00 | 222.67 |
| 2022-23 | 422.00 | 30.552 |
| **ಒಟ್ಟು** | **1266.00** | **424.462** |

ನಿರ್ದೇಶಕರು ಆಡಳಿತ-2
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ